722 (538) ಶ್ರೀ ಸುರೇಶ್ ಎಸ್. ಮಾರಿಹಾಳ (ಕಿತ್ತೂರು) – ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿತ್ತೂರ ಮತಕ್ಷೇತ್ರದಲ್ಲಿ ಇರುವ ಒಟ್ಟು ನ್ಯಾಯ ಬೆಲೆ ಅಂಗಡಿಗಳೆಷ್ಟು ;

ಆ) ಇದರಲ್ಲಿ ನ್ಯಾಯ ಬೆಲೆಯಲ್ಲಿ ವಿತರಿಸಲಾಗುವ ವಿವಿಧ ಬಗೆಯ ಪಡಿತರವೆಷ್ಟು ;

ಇ) ಕಿತ್ತೂರ ಕ್ಷೇತ್ರಕ್ಕೆ ಹೊಸದಾಗಿ ಎಷ್ಟು ನ್ಯಾಯ ಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಉದ್ದೇಶಿಸಲಾಗಿದೆ ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಕಿತ್ತೂರು ಮತಕ್ಷೇತ್ರದಲ್ಲಿ 76 ನ್ಯಾಯಬೆಲೆ ಅಂಗಡಿಗಳು ಇರುತ್ತವೆ.

ಆ) ಕಿತ್ತೂರು ಮತ ಕ್ಷೇತ್ರದ ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಿಸುವ ಪಡಿತರ ವಿವರಗಳು ಕೆಳಕಂಡಂತ್ತಿರುತ್ತದೆ.

(ಕ್ವಿಂ.ಗಳಲ್ಲಿ)

| ಪಡಿತರ ಚೀಟಿಗಳ ವಿಧ | ಅಕ್ಕಿ (ಕ್ವಿಂ. ಗಳಲ್ಲಿ) | ಗೋಧಿ (ಕ್ವಿಂ. ಗಳಲ್ಲಿ) | ಸಕ್ಕರೆ (ಕ್ವಿಂ. ಗಳಲ್ಲಿ) | ಸೀಮೆ ಎಣ್ಣೆ (ಲೀಟರ್ ಗಳಲ್ಲಿ) |
|---|---|---|---|---|
| ಅಂತ್ಯೋದಯ | 1522.08 | 380.52 | 54.36 | 21744 |
| ಬಿಪಿಎಲ್ | 5153.20 | 1288.30 | 257.66 | 103064 |
| ಎಪಿಎಲ್ | – | – | – | 6800 |
| ಒಟ್ಟು | 6675.28 | 1668.82 | 312.02 | 131608 |

ಇ) ಕಿತ್ತೂರು ಮತಕ್ಷೇತ್ರದಲ್ಲಿ ಪಡಿತರ ಚೀಟಿದಾರರಿಗೆ ಅನುಗುಣವಾಗಿ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಲು ಉದ್ದೇಶಿಸಲಾಗಿದೆ. 5 ಗ್ರಾಮಗಳಲ್ಲಿ ನ್ಯಾಯಬೆಲೆ ಅಂಗಡಿಗಳ ಅಧಿಸೂಚನೆಯನ್ನು ಹೊರಡಿಸಲಾಗಿದೆ.

723 (981) ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಗಾರಪೇಟೆ ತಾಲ್ಲೂಕು ವ್ಯಾಪ್ತಿಯ 'ಜಲಾನಯನ ಅಭಿವೃದ್ಧಿ'ಗಾಗಿ 2005-06ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ಮಂಜೂರಾದ ಹಣವೆಷ್ಟು ; (ವಿವರ ನೀಡುವುದು) ;

ಆ) ಈ ಹಣದಲ್ಲಿ ಶೇ.75ಕ್ಕೂ ಹೆಚ್ಚು ಹಣ ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ತೋಟಗಾರಿಕೆ ಹಾಗೂ ಅರಣ್ಯಗಾರಿಕೆ ಕಾಮಗಾರಿಗಳು ಮಾಡದೇ ರೈತರನ್ನು ವಂಚಿಸಿರುವ ಪ್ರಕರಣಗಳನ್ನು ಸರ್ಕಾರ ಗಮನಿಸಿದೆಯೇ ;

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) :

ಅ) ಬಂಗಾರುಪೇಟೆ ತಾಲ್ಲೂಕಿಗೆ ಜಲಾನಯನ ಅಭಿವೃದ್ಧಿ ಇಲಾಖೆ ಮೂಲಕ 2005-06ನೇ ಸಾಲಿನಲ್ಲಿ 291.096 ಲಕ್ಷ ರೂ.ಗಳು ಮಂಜೂರಾಗಿದ್ದು, ಇದರ ಯೋಜನಾವಾರು ವಿವರಗಳನ್ನು ಕೆಳಗೆ ನೀಡಲಾಗಿದೆ.

(ಲಕ್ಷ ರೂ.ಗಳಲ್ಲಿ)

| ಯೋಜನೆ | ಮಂಜೂರಾದ ಹಣ | ಖರ್ಚಾದ ಹಣ |
|---|---|---|
| ಡಿ.ಪಿ.ಎ.ಪಿ. | 49.094 | 38.76 |
| ರಾ.ಜ.ಅ.ಯೋ | 33.701 | 31.37 |
| ಆರ್.ಐ.ಡಿ.ಎಫ್. | 18.301 | 18.301 |
| ಸುಜಲ | 190.00 | 161.867 |
| ಒಟ್ಟು | 291.096 | 250.298 |

ಆ) ಇಲ್ಲಾ.

ಇ) ಇಲ್ಲಾ.

ಈ) ಉದ್ಭವಿಸುವುದಿಲ್ಲ.